ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳು (ಟಿ ಟಿ ಐ)	24
ಶಿಕ್ಷಣ ಮಹಾವಿದ್ಯಾಲಯಗಳು (ಬಿ ಇ ಡಿ)	04

ಇ) ಹೌದು

ಈ) ಉದ್ಭವಿಸುವುದಿಲ್ಲ.

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳು

1021 (1426)

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ವೈದ್ಯರ ಒಟ್ಟು ಸಂಖ್ಯೆ ಎಷ್ಟು?

ಆ) ಖಾಯಂ ಆಗಿ ಕೆಲಸ ಮಾಡುತ್ತಿರುವ ವೈದ್ಯರ ಸಂಖ್ಯೆ ಎಷ್ಟು?

ಇ) ಎರವಲು ಸೇವೆಯ (ನಿಯೋಜನೆ) ಮೇಲೆ ಕೆಲಸ ಮಾಡುತ್ತಿರುವ ವೈದ್ಯರ ಸಂಖ್ಯೆ ಎಷ್ಟು?

ಈ) ಯಾವ ಯಾವ ವೈದ್ಯರು ಎಷ್ಟು ವರ್ಷಗಳಿಂದ ಎರವಲು ಸೇವೆಯ ಮೇಲೆ ಕೆಲಸ ಮಾಡುತ್ತಿದ್ದಾರೆ? ಎರವಲು ಸೇವೆಯ ನಿಯೋಜನೆಗೆ ಇರಬೇಕಾದ ಅರ್ಹತೆ ನಿಯಮಗಳೇನು? ಇದನ್ನು ಈ ಆಸ್ಪತ್ರೆಯಲ್ಲಿ ನಿಲ್ಲಿಸಲಾಗಿದೆಯೇ?

ಡಾ. ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಟ್ಟು ವೈದ್ಯರ ಸಂಖ್ಯೆ : 93

ಆ) " " " : 87

" " " : 06

ಇ ಮತ್ತು ಈ) ಈ ಕೆಳಗೆ ತಿಳಿಸಿದ ವೈದ್ಯರುಗಳು ಅವರುಗಳ ಹೆಸರಿನ ಮುಂದೆ ತಿಳಿಸಿದ ದಿನಾಂಕದಿಂದ ಎರವಲು ಸೇವೆ ಮೇಲೆ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ

1) ಡಾ.ಹೆ.ವಿ.ವೆಂಕಟೇಶ್ - ದಿ 14-3-91 ರಿಂದ ಇಲ್ಲಿಯವರೆಗೆ 7 ವರ್ಷ 7 ತಿಂಗಳು.

2) ಡಾ.ಬಿ.ಸಿ.ಬೊಮ್ಮಯ್ಯ - ದಿ 1-2-96 ರಿಂದ ಇಲ್ಲಿಯವರೆಗೆ 3 ವರ್ಷ 1 ತಿಂಗಳು.

3) ಡಾ.ಆರ್.ತಿಪ್ಪನಾಯಕ್ - ದಿ 26-8-97 ರಿಂದ ಇಲ್ಲಿಯವರೆಗೆ 2 ವರ್ಷ

4) ಡಾ.ಹೆ.ಎಸ್.ರವೀಂದ್ರನಾಥ್ - ದಿ13-3-93 ರಿಂದ ಇಲ್ಲಿಯವರೆಗೆ 6 ವರ್ಷ

5) ಡಾ.ಸಿ.ಬಿ.ಪಾಟೀಲ್ - ದಿ 5-6-93 ರಿಂದ 27-8-94 ಹಾಗೂ ದಿ 8-6-95 ರಿಂದ ಇಲ್ಲಿಯವರೆಗೆ 4 ವರ್ಷ 11 ತಿಂಗಳು.

6) ಡಾ.ಅರುಣ್ ವಿ.ಕುಸುಗಲ್ - ದಿ 21-3-91 ರಿಂದ 31-5-93 ಮತ್ತು 25-2-94 ರಿಂದ 5-3-97 ಹಾಗೂ ದಿ 3-2-98 ರಿಂದ ಇಲ್ಲಿಯವರೆಗೆ 5 ವರ್ಷ 10 ತಿಂಗಳು

ಎರವಲು ಸೇವೆಗೆ ಯಾವುದೇ ನಿಯಮಗಳು ಇರುವುದಿಲ್ಲ. ಆದರೇ ಎರವಲು ಸೇವೆಗೆ ಬರುವವರು ಹೃದ್ರೋಗ ವಿಭಾಗದಲ್ಲಿ ಡಿ.ಎಂ.ಕಾರ್ಡಯಾಲಜಿ ಸ್ನಾತಕೋತ್ತರ ಪದವಿಯನ್ನು ಹಾಗೂ ಹೃದ್ರೋಗ ಶಸ್ತ್ರ ಚಿಕತ್ಸೆ ವಿಭಾಗಕ್ಕೆ ಬರುವವರು ಎಂ.ಸಿ.ಹೆಚ್.ತೋರಾಸಿಕ್ ಮತ್ತು ಕಾರ್ಡಿಯೋವ್ಯಾಸ್ಕುಲರ್ ಸರ್ಜರಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು ಫೆಬ್ರವರಿ 1998ರ ನಂತರ ಯಾರು ಎರವಲು ಸೇವೆಯ ಮೇಲೆ ಈ ಸಂಸ್ಥೆಗೆ ಬಂದಿರುವುದಿಲ್ಲ.

ರಾಜ್ಯದಲ್ಲಿ ನೋಂದಾಯಿತ ವಾಣಿಜ್ಯ ಶಾಲೆಗಳು

1023 (1117)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ನೋಂದಾಯಿತ ವಾಣಿಜ್ಯ ಶಾಲೆಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡವುದು

ಆ) ಈ ಸಂಸ್ಥೆಗಳಿಗೆ ಸರ್ಕಾರ ನೀಡುವ ಸೌಲಭ್ಯಗಳೇನು ?

ಇ) ಕಂಪ್ಯೂಟರೀಕರಣ ಯುಗದಲ್ಲಿ ನೇರವಾಗಿ ಪರಿಣಾಮ ಎದುರಿಸುತ್ತಿರುವ ಇಂತಹ ಸಂಸ್ಥೆಗಳಿಗೆ ಸರ್ಕಾರ ಸಹಾಯ ಧನ ಒದಗಿಸಿ ಅಲ್ಲಿನ ಪ್ರಾಚಾರ್ಯರಿಗೆ ಗೌರವ ಧನ ನೀಡುವುದರ ಮುಖಾಂತರ ಸರ್ಕಾರ ಈ ಸಂಸ್ಥೆಗಳನ್ನು ರಕ್ಷಿಸುವುದೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಶಾಲೆಗಳ ಸಂಖ್ಯೆ : 1829 (ಜಿಲ್ಲಾವಾರು ವಾಣಿಜ್ಯ ಶಾಲೆಗಳ ಪಟ್ಟಿಯನ್ನು ಅನುಬಂಧ -1 ರಂತೆ ಇದರೊಂದಿಗೆ ಲಗತ್ತಿಸಿದೆ)

ಆ) ಸರ್ಕಾರವು ಸಹಾಯ ಧನ ಸೌಲಭ್ಯವನ್ನು ನೀಡುತ್ತಿಲ್ಲ

ಇ) ವಾಣಿಜ್ಯ ಶಾಲೆಗಳ ಪ್ರಾಚಾರ್ಯರಿಗೆ ಸಹಾಯ ಧನ ಅಥವಾ ಗೌರವ ಧನ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ